ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2285
ಸದಸ್ಯರ ಹೆಸರು : ಡಾ|| ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
ಉತ್ತರಿಸುವವರು : ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಉತ್ತರಿಸಬೇಕಾದ ದಿನಾಂಕ : 26/03/2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕೇಂದ್ರ ಸರ್ಕಾರದ "ಪ್ರಧಾನ ಮಂತ್ರಿ ಮಾತೃವಂದನ ಯೋಜನೆ"ಯನ್ನು (ಪಿ.ಎಂ.ಎಂ.ವಿ.ವೈ) ಕರ್ನಾಟಕ ರಾಜ್ಯದಲ್ಲಿ ಜಾರಿಗೊಳಿಸಲಾಗಿದೆಯೇ; ಇದ್ದರೆ ಅದರ ವಿವರಗಳನ್ನು ಮತ್ತು ರೂಪುರೇಷೆಗಳನ್ನು ನೀಡುವುದು.	ಕೇಂದ್ರ ಸರ್ಕಾರದ "ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ" (PMMVY) ಯನ್ನು ಕರ್ನಾಟಕ ರಾಜ್ಯದಲ್ಲಿ 01-01-2017 ರಿಂದ ಜಾರಿಗೊಳಿಸಲಾಗಿದೆ. **ಯೋಜನೆಯ ಉದ್ದೇಶಗಳು:** ಈ ಯೋಜನೆಯು 60:40 ಕೇಂದ್ರ:ರಾಜ್ಯ ಸರ್ಕಾರದ ಧನ ಸಹಾಯ ಯೋಜನೆಯಾಗಿದೆ. 0-6 ತಿಂಗಳಿನವರೆಗೆ ಕೇವಲ ತಾಯಿ ಎದೆ ಹಾಲುಣಿಸುವುದು, ಹೆರಿಗೆಯಾದ ಒಂದು ಗಂಟೆಯೊಳಗೆ ಎದೆ ಹಾಲುಣಿಸುವುದು ಹಾಗೂ ಅತಿ ಸಣ್ಣ ಮಕ್ಕಳಿಗೆ ಎದೆ ಹಾಲುಣಿಸುವ ಅಭ್ಯಾಸಗಳನ್ನು (IYCF) ಬೆಳೆಸಿಕೊಳ್ಳುವ ಬಗ್ಗೆ ಮಹಿಳೆಯರನ್ನು ಪ್ರೋತ್ಸಾಹಿಸುವುದು ಹಾಗೂ ಗರ್ಭಿಣಿಯರಿಗೆ ಬಾಣಂತಿಯರಿಗೆ ಆರೋಗ್ಯ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಉತ್ತಮ ವಾತಾವರಣ ಸೃಷ್ಟಿಸಲು ನಗದು ರೂಪದಲ್ಲಿ ಪ್ರೋತ್ಸಾಹ ನೀಡುವುದು. **ಯೋಜನೆಯಡಿ ಒದಗಿಸುವ ಸೌಲಭ್ಯಗಳು:** • ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಗರ್ಭಿಣಿ/ಬಾಣಂತಿ ಮಹಿಳೆಯರಿಗೆ ರೂ.5000/-ಗಳ ಸಹಾಯಧನವನ್ನು ಮೂರು ಕಂತುಗಳಲ್ಲಿ ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಯ ಖಾತೆಗೆ ವರ್ಗಾಯಿಸಲಾಗುವುದು. **1 ನೇ ಕಂತು**: ರೂ.1000/-ಗಳನ್ನು ಗರ್ಭಿಣಿ ಎಂದು ಅಂಗನವಾಡಿ ಕೇಂದ್ರಗಳಲ್ಲಿ ನೋಂದಣಿಯಾದಾಗ (150 ದಿನಗಳೊಳಗಾಗಿ) ವರ್ಗಾಯಿಸಲಾಗುವುದು. **2 ನೇ ಕಂತು:** ರೂ. 2000/-ಗಳನ್ನು ಕನಿಷ್ಠ ಒಂದು ಆರೋಗ್ಯ ತಪಾಸಣೆ ಕೈಗೊಂಡಾಗ (ಗರ್ಭಿಣಿಯಾಗಿ 6ತಿಂಗಳ ನಂತರ) ವರ್ಗಾಯಿಸಲಾಗುವುದು. **3 ನೇ ಕಂತು**: ರೂ.2000/-ಗಳನ್ನು ಮಗುವಿನ ಜನನದ ನಂತರ ಜನನ ನೋಂದಣಿ ಮತ್ತು ಮೊದಲನೇ ಹಂತದ ಚುಚ್ಚುಮದ್ದು (OPV, BCG, DPT, Hepatitis-B ಅಥವಾ ಬದಲಿ ಲಸಿಕೆಯನ್ನು ಪಡೆದಲ್ಲಿ) ಪಡೆದ ನಂತರ ವರ್ಗಾಯಿಸಲಾಗುವುದು.

<table>
<tr>
<td></td>
<td></td>
<td>

ಯೋಜನೆಯ ಫಲಾನುಭವಿಗಳು:

- ಸದರಿ ಯೋಜನೆಯ ಸೌಲಭ್ಯವು ಮೊದಲ ಜೀವಂತ ಹೆರಿಗೆಗೆ ಮಾತ್ರ ಸೀಮಿತವಾಗಿರುತ್ತದೆ.
- ಕೇಂದ್ರ / ರಾಜ್ಯ ಸರ್ಕಾರಿ ನೌಕರರು ಹಾಗೂ ಸಾರ್ವಜನಿಕ ಉದ್ದಿಮೆಗಳ ನೌಕರರನ್ನು ಹೊರತು ಪಡಿಸಿ ರಾಜ್ಯದ ಎಲ್ಲಾ ಗರ್ಭಿಣಿ ಮತ್ತು ಬಾಣಂತಿಯರು, ಈ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ.

ದಿನಾಂಕ:1-1-2017 ರಿಂದ ದಿನಾಂಕ:19-03-2021 ರವರೆಗೆ ಒಟ್ಟು 1307811 ಫಲಾನುಭವಿಗಳು ನೊಂದಣಿಯಾಗಿರುತ್ತಾರೆ. ಅದರಲ್ಲಿ 1263619 ಫಲಾನುಭವಿಗಳಿಗೆ ರೂ.49280.30 ಲಕ್ಷಗಳನ್ನು ಸಹಾಯಧನವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ಜಮೆ ಮಾಡಲಾಗಿರುತ್ತದೆ.

</td>
</tr>
<tr>
<td>ಆ)</td>
<td>ಈ ಯೋಜನೆಗಳ ಮಾರ್ಗಸೂಚಿಯಂತೆ, ಈ ಯೋಜನೆ ಆರಂಭದಿಂದ ತಹಲ್ ವರೆವಿಗೂ ಎಷ್ಟು ತಾಯಿ ಮಕ್ಕಳ ರಕ್ಷಣೆ ಕಾರ್ಡ್(ಎಂ.ಸಿ.ಪಿ)ಗಳನ್ನು ವಿತರಿಸಲಾಗಿದೆ;</td>
<td>

ತಾಯಿ ಮಕ್ಕಳ ರಕ್ಷಣೆ ಕಾರ್ಡ್ (ಎಂ.ಸಿ.ಪಿ) ವಿತರಿಸಿದ ವಿವರ ಕೆಳಕಂಡಂತಿವೆ:-

<table>
<tr><th>ವರ್ಷ</th><th>ಫಲಾನುಭವಿಗಳ ಸಂಖ್ಯೆ</th></tr>
<tr><td>2017 ಜನವರಿ ಯಿಂದ ಮಾರ್ಚ್</td><td>2,32,333</td></tr>
<tr><td>2017-18</td><td>10,06,740</td></tr>
<tr><td>2018-19</td><td>11,18,095</td></tr>
<tr><td>2019-20</td><td>10,48,996</td></tr>
<tr><td>2020-2021(09.03.2021 ರವರೆಗೆ)</td><td>9,08,106</td></tr>
</table>

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

</td>
</tr>
<tr>
<td>ಇ)</td>
<td>ಈ ಕಾರ್ಡ್‌ಗಳನ್ನು ವಿತರಿಸಲು ಸರ್ಕಾರ ನಿಗಧಿಪಡಿಸಿರುವ ಕಾಲಾವಧಿ ಎಷ್ಟು ಮತ್ತು ಕಾರ್ಡ್‌ಗಳನ್ನು ಅಪೇಕ್ಷಿಸಿ ಬಂದಿರುವ ಅರ್ಜಿಗಳನ್ನು ಪರಿಶೀಲಿಸುವ ಮತ್ತು ವಿಲೇವಾರಿ ಮಾಡುವ ಪ್ರಕ್ರಿಯೆಗೆ ತೆಗೆದುಕೊಂಡಿರುವ ಕಾಲಾವಧಿ ಎಷ್ಟು; ಬಾಕಿ ಉಳಿದಿರುವ ಪ್ರಕರಣಗಳೆಷ್ಟು? (ಜಿಲ್ಲಾವಾರು ವಿವರವನ್ನು ನೀಡುವುದು)</td>
<td>ತಾಯಿ ಕಾರ್ಡ್ (MCP)ಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ನೀಡಲಾಗುತ್ತಿದ್ದು, ಅರ್ಹ ಫಲಾನುಭವಿಯು ಆರೋಗ್ಯ ಉಪ ಕೇಂದ್ರ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಿರಿಯ ಆರೋಗ್ಯ ಮಹಿಳಾ ಸಹಾಯಕಿಯರಿಂದ ಪಡೆಯಬಹುದಾಗಿರುತ್ತದೆ ಹಾಗೂ ಈ ತಾಯಿ ಕಾರ್ಡ್‌ಗಳನ್ನು ನೋಂದಣಿ ಸಮಯದಲ್ಲಿ ವಿತರಿಸಲಾಗುವುದು ಮತ್ತು ತಾಯಿ ಕಾರ್ಡ್‌ಗಳನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಬೇಕಾಗಿರುವುದಿಲ್ಲ.</td>
</tr>
</table>

ಸಂಖ್ಯೆ: ಮಮಇ 146 ಐಸಿಡಿ 2021

Halappa

(ಆಚಾರ ಹಾಲಪ್ಪ ಬಸಪ್ಪ)

ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು
ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಅನುಬಂಧ-. (ಪ್ರಶ್ನೆ ಸಂಖ್ಯೆ-1127/2021)

ತಾಯಿ ಕಾರ್ಡ್ ಗಳನ್ನು ಪಡೆದ ಫಲಾನುಭವಿಗಳ ಸಂಖ್ಯೆ

Sl.no	District	2017-January to 2017-March	2017-18	2018-19	2019-20	2020-21 (till date:09-3-2021)
1	Bagalkote	9,242	37,475	40,771	42,140	33,875
2	Ballari	11,287	48,374	64,021	60,757	55,991
3	Belagavi	3,986	14,778	97,662	94,868	78,040
4	Bengaluru Rural	14,718	1,12,387	13,779	14,990	13,030
5	Bengaluru Urban	27,255	1,13,025	2,16,395	1,46,534	1,18,855
6	Bidar	8,069	33,299	34,075	34,385	30,157
7	Chamarajanagar	2,384	12,333	11,453	11,412	10,037
8	Chikkaballapur	4,802	18,323	17,823	17,454	16,841
9	Chikkamagaluru	3,250	13,847	13,393	13,183	12,269
10	Chitradurga	6,710	27,298	30,296	27,526	25,558
11	Dakshina Kannada	8,056	29,737	28,855	28,511	24,792
12	Davanagere	7,790	32,536	24,919	25,344	22,137
13	Dharwad	8,129	34,988	35,362	33,757	28,242
14	Gadag	5,213	20,902	21,326	19,989	17,947
15	Hassan	5,549	22,117	21,969	22,450	21,656
16	Haveri	5,821	26,962	28,922	28,238	22,814
17	Kalaburagi	13,908	62,508	54,908	60,259	53,136
18	Kodagu	1,834	7,855	7,264	7,127	6,106
19	Kolar	5,350	21,293	20,997	22,572	20,740
20	Koppal	6,631	31,469	32,590	30,071	27,192
21	Mandya	5,259	21,775	20,803	22,198	21,394
22.	Mysuru	9,119	38,008	35,487	38,319	33,914
23	Raichur	9,726	39,119	48,444	47,656	41,916
24	Ramanagara	3,944	14,032	12,079	13,939	12,947
25	Shivamogga	5,713	24,797	21,632	23,590	20,777
26	Tumakuru	8,933	34,835	36,633	36,063	33,872
27	Udupi	4,042	14,736	15,059	14,523	12,020
28	Uttara Kannada	5,297	20,865	19,351	19,366	15,714
29	Vijayapura	13,205	48,692	60,020	57,754	48,432
30	Yadgir	7,111	28,375	31,807	34,021	27,705
	Karnataka	2,32,333	10,06,740	11,18,095	10,48,996	9,08,106